ಕರ್ಪೂರ ಹಳ್ಳದ ಕೆರೆಯನ್ನು ಜಾಗತಿಕ ಬ್ಯಾಂಕಿನ ನೆರವಿಗಾಗಿ ಕಳುಹಿಸಿಕೊಡುವ ಬಗ್ಗೆ

೧೧೮೯. ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).— ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ಪೂರಹಳ್ಳದ ಕೆರೆಯ ನೀರ ನಷ್ಟೆ ಮಾಡಲು ಸರ್ಕಾರಕ್ಕೆ ಇರುವ ತೊಂದರೆಗಳೇನು ?

ಆ) ದೊಡ್ಡ ಗಾತ್ರದ ಈ ಕೆರೆಯ ನಿರ್ಮಾಣದಿಂದ ಸಾರ್ವಜನಿಕರಿಗೆ ಆರ್ಥಿಕ ಅಭಿವೃದಿಯಾಗಲು ಜಾಗತಿಕ ಬ್ಯಾಂಕಿನ ನೆರವಿಗಾಗಿ ಬೇಡಿಕೆ ಸಲ್ಲಿಸಲು ಸರ್ಕಾರದ ಕಾರ್ಯಕ್ರಮವೇನು ?

ಇ) ಅರ್ಬನ್ ವಾಟರ್ ಸಪ್ಲ್ಯೂ ಇಲಾಖೆಯಿಂದ ಈಗಾಗಲೇ ಸಮೀಕ್ಷೆ ಮಾಡಲಾಗಿದ್ದು, ಅದನ್ನು ನೀರಾವರಿ ಕೆರೆಯ ರೂಪಕ್ಕೆ ತರುವುದಕ್ಕೆ ಲೋಕೋಪಯೋಗಿ ಇಲಾಖೆಯವರು ಹಿಂದೇಟು ಹಾಕುತ್ತಿರುವುದಕ್ಕೆ ಕಾರಣವೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನೆ ಮತ್ತು ನೀರಾವರಿ ಮಂತ್ರಿಗಳು).—

ಅ) ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರು ಸಂಕೇಶ್ವರ ನಗರಕ್ಕೆ ಕುಡಿಯುವ ನೀರಿನ ಸರಬರಾಜು ಯೋಜನೆಯನ್ನು ಕೈಗೊಳ್ಳಲು ಉದ್ದೇಶಿಸಿದ್ದುದರಿಂದ, ಈ ಕಾಮಗಾರಿಯ ನೀಲ ನಕ್ಷೆಯನ್ನು ತಯಾರು ಮಾಡಲಿಲ್ಲ.

ಆ) ಈ ಕೆರೆಯ ನಿರ್ಮಾಣಕ್ಕಾಗಿ ಜಾಗತಿಕ ಬ್ಯಾಂಕಿನ ನೆರವು ತೆಗೆದುಕೊಳ್ಳುವ ಉದ್ದೇಶವಿಲ್ಲ.

ಇ) ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರು ಕುಡಿಯುವ ನೀರು ಸರಬರಾಜು ಯೋಜನೆಯನ್ನು ಕೈಬಿಟ್ಟಿರುವುದಾಗಿ ಇತ್ತೀಚೆಗೆ ತಿಳಿದು ಬಂದಿರುವುದರಿಂದ, ನೀರಾವರಿಗಾಗಿ, ಈ ಕೆರೆಯನ್ನು ಸಮೀಕ್ಷೆ ಮಾಡಲು ಪರಿಶೀಲಿಸಲಾಗುವುದು.

ತುಮಕೂರು ಜಿಲ್ಲೆಯ ಪ್ರಾಥಮಿಕ ಉಪಾಧ್ಯಾಯರುಗಳ ಹುದ್ದೆಗಳು

೧೨೨೦. ಶ್ರೀ ಜಿ. ಎಸ್. ಶಿವಣ್ಣಪ್ಪ (ಗುಬ್ಬಿ).— ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆಯಲ್ಲಿ ಪ್ರಾಥಮಿಕ ಪಾಠಶಾಲೆಗಳಿರುವುದೆಷ್ಟು?

ಸದರಿ ಶಾಲೆಗಳಿಗೆ ಮಂಜೂರು ಆಗಿರುವ ಉಪಧ್ಯಾಯರುಗಳ ಸಂಖ್ಯೆ ಎಷ್ಟು? (ಸ್ಯಾಂಕ್ಷನ್ಡ್ ಅಂಡ್ ಅನ್‌ಫಿಲ್ಡ್ ವೇಕೆನ್ಸೀಸ್)

ಸದರೀ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಆ) ತುಮಕೂರು ಜಿಲ್ಲೆಯಲ್ಲಿ ಅಗತ್ಯವಿರುವ ಪ್ರಾಥಮಿಕ ಶಾಲಾ ಶಿಕ್ಷಕರ ಸಂಖ್ಯೆ ಎಷ್ಟು? ತಾಲ್ಲೂಕುವಾರು ಮಾಹಿತಿ ನೀಡುವುದು?

ಇ) ಆ ಪೈಕಿ ಸ್ವಂತ ಕಟ್ಟಡಗಳನ್ನು ಹೊಂದಿರುವ ಶಾಲೆಗಳೆಷ್ಟು?

ಈ) ಸದರೀ ಶಾಲೆಗಳಿಗೆ ನೇಮಕ ಮತ್ತು ನೇಮಕವಾಗಬೇಕಾಗಿರುವ ಉಪಾಧ್ಯಾಯರುಗಳ ಸಂಖ್ಯೆ ಎಷ್ಟು?

ಉ) ಇಲ್ಲದಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ರಾಜ್ಯ ಸಚಿವರು).—

ಅ) ಇಷ್ಟಿಗೆ

ಮಂಜೂರಾಗಿರುವುದು	ಮಂಜೂರಾಗಿರುವ ಪೈಕಿ ಖಾಲಿಇರುವ ಹುದ್ದೆಗಳು
೭೫೪೮	೩೪೨

ಸರ್ಕಾರಿ ಆದೇಶ ಸಂಖ್ಯೆ ಇಡಿ ೮೫ ಪಿ ಎಂ ಎಸ್ ೮೭ ದಿ. ೨೦-೫-೮೮ರಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಖಾಲಿ ಹುದ್ದೆಗಳನ್ನು ಜಿಲ್ಲಾ ಆಯ್ಕೆ ಸಮಿತಿಯ ಮೂಲಕ ನೇಮಕಾತಿ ಮಾಡಿಕೊಳ್ಳಲು ಆದೇಶ ನೀಡಲಾಗಿದೆ. ಸದರಿ ಸರ್ಕಾರೀ ಆದೇಶದನ್ವಯ ಕೂಡಲೇ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಆ)	ತುಮಕೂರು	೩೪೪
	ಪಾವಗಡ	೨೨೪
	ಶಿರಾ	೨೩೦
	ಶಿಪಟೂರು	೨೬೨
	ಗುಬ್ಬಿ	೩೦೭
	ತುರುವೇಕೆರೆ	೧೨೭
	ಕೊರಟಗೆರೆ	೧೪೭
	ಮಂಧುಗಿರಿ	೨೪೨
	ಕುಣಿಗಲ್	೨೮೭
	ಚಿಕ್ಕನಾಯ್ಕನಹಳ್ಳಿ	೫೭
		೨೦೩೨

ಇ) ೨೮೫೪

ಈ) ೩೪೨

ಉ) ಸರ್ಕಾರೀ ಆದೇಶ ಸಂಖ್ಯೆ ಇಡಿ ೮೫ ಪಿಎಂಎಸ್ ೮೭ ದಿ. ೨೦-೫-೮೮ರ ಅನ್ವಯ ಈಗಾಗಲೇ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳನ್ನು ಭರ್ತಿಮಾಡಲು ಜಿಲ್ಲಾ ನೇಮಕಾತಿ ಸಮಿತಿಗಳು ಕಾರ್ಯಗತವಾಗಿವೆ.

ಭೂ ಸಂರಕ್ಷಣಾ ಯೋಜನೆಯ ಬಗ್ಗೆ

೧೭೨೨ ಶ್ರೀ ಜಿ. ಎಸ್. ಶಿವಸಂಜಪ್ಪ (ಗುಬ್ಬಿ). — ಮಾನ್ಯ ಕೃಷಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಭೂಸಾರ ಸಂರಕ್ಷಣಾ ಯೋಜನೆಯಲ್ಲಿ ಖರ್ಚು ಮಾಡಿದ ಹಣವನ್ನು (ಹೊಲಗಳಿಗೆ ಬದು ಹಾಕಿರುವುದು ಕೃಷಿ ಹೊಂಡ ಕೊರಕಲು ತಡೆ ಇತ್ಯಾದಿ) ಬಲಾತ್ಕಾರದಿಂದ ರೈತರಿಂದ ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ ಇದರಿಂದ ರೈತರಿಗೆ ತೊಂದರೆ ಯಾಗುವುದು ನಿಜವಲ್ಲವೇ ?

ಆ) ಈ ಹಣವನ್ನು ಮನ್ನಾ ಮಾಡಬೇಕೆಂದು ಸಾರ್ವಜನಿಕರು ಮನವಿಯನ್ನು ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಈ) ಹಾಗಿಲ್ಲದಿದ್ದಲ್ಲಿ ಕ್ರಮ ಕೈಗೊಳ್ಳುವುದು ಯಾವಾಗ ?